**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಹೊನ್ನಾವರ.**

**ಸಿ.ಸಿ. ನಂ. 1041-2023.**

ಪಿರ್ಯಾದುದಾರರುಃ- ಮಂಕಿ ಪೊಲೀಸ್ ಠಾಣೆ ,
ಮಂಕಿ.
ತಾಲೂಕುಃ- ಹೊನ್ನಾವರ

**- ವಿರುದ್ಧ -**

ಆರೋಪಿತರುಃ- ಎ-1 ಪ್ರಸಾದ ತಂದೆ ವೆಂಕಟರಮಣ ಆಚಾರಿ ,
ಎ-2 ಮಣಿಕಂಠ ತಂದೆ ಮಂಜುನಾಥ ನಾಯ್ಕ.

*******

**ದೋಷರೋಪಣೆ.**

ಶ್ರೀ ಈರಣ್ಣ ಹುಣಶಿಕಟ್ಟಿ, ಬಿ.ಕಾಂ. ಎಲ್.ಎಲ್.ಬಿ., ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯಿಕ ದಂಡಾಧಿಕಾರಿಯಾದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆಪಾದನೆ ಹೊರಿಸುತ್ತಿದ್ದೇನೆ.

ದಿನಾಂಕ 21/03/2023 ರಂದು ರಾತ್ರಿ 8.00 ಗಂಟೆಯ ಸುಮಾರಿಗೆ ಮಂಕಿ ಪೊಲೀಸ್ ಠಾಣಾ ವ್ಯಾಪ್ತಿಯ ಗುಣವಂತೆ ಕೆರೆಮನೆಯ ಹತ್ತಿರ ಹಾದು ಹೋದ ಎನ್.ಎಚ್ 66 ರಲ್ಲಿ ಆರೋಪಿತರಾದ ನೀವಿಬ್ಬರೂ ಅಪರಾಧ ಮಾಡುವ ಸಮಾನ ಉದ್ದೇಶದಿಂದ 1 ನೇ ಆರೋಪಿಯಾದ ನೀನು ನಿನ್ನ ಮೋಟಾರ್ ಸೈಕಲ್ ನಂ.ಕೆಎ-47-ಡಬ್ಲ್ಯೂ-0136 ರ ಹಿಂಬದಿಯ ಸೀಟಿನಲ್ಲಿ 2 ನೇ ಆರೋಪಿಯನ್ನು ಕೂರಿಸಿಕೊಂಡು ಹೊನ್ನಾವರ ಕಡೆಯಿಂದ ಹಿನ್ನೂರಿಗೆ ಹೋಗುತ್ತಿದ್ದಾಗ, ಅದೇ ವೇಳೆ ಪಿರ್ಯಾದಿಯವರು ಕಾರ್ ನಂ.ಕೆಎ-70-1711 ನ್ನು ಗುಣವಂತೆಯ ಸರ್ಕಲ್ ನಲ್ಲಿರುವ ಡಿವೈಡರ್ ಗ್ಯಾಪಿನಲ್ಲಿ ಒಮ್ಮೆಲೆ ಕೆರೆಮನೆ ಕಡೆಗೆ ಹೋಗಲು ಅವರು ಕಾರನ್ನು ತಿರುಗಿಸಿ ಅಡ್ಡ ಬಂದ ಎಂದು ಸಿಟ್ಟಾದ ನೀವಿಬ್ಬರೂ, ಪಿರ್ಯಾದಿಯ ಕಾರನ್ನು ಹಿಂಬಾಲಿಸಿಕೊಂಡು ಹೋಗಿ ಜೈ ಮಾತಾದಿ ರದ್ದಿ ಪೇಪರ್ ಅಂಡಿಯ ಎದುರಿಗೆ ಕಾರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿದ್ದು, ಈ

ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ. 341 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ನಿಮ್ಮ ಮೋಟಾರ್ ಸೈಕಲಿಗೆ ಅಡ್ಡ ಬಂದ ಎಂದು ಪಿರ್ಯಾದಿಯ ಕಾರನ್ನು ಹಿಂಬಾಲಿಸಿ ತಡೆದು ಕಾರಿನಲ್ಲಿದ್ದ ಪಿರ್ಯಾದಿಗೆ ಉದ್ದೇಶಿಸಿ ಏ ಬೋಳಿಮಗನೆ ಕಾರನ್ನು ಸರಿಯಾಗಿ ಓಡಿಸು ಎಂದು ಬೈದು ಹಾಗೂ ಕಾರಿನಲ್ಲಿದ್ದ ಚಾಸಾ 4 ಮತ್ತು 5 ರವರಿಗೂ ಸಹ ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದು, ಈ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, 1 ನೇ ಆರೋಪಿಯಾದ ನೀವು, ಚಾಲನಾ ಪತ್ರ ಇಲ್ಲದೇ ಮೋಟಾರ್ ಸೈಕಲನ್ನು ಚಲಾಯಿಸಿದ್ದು, ಈ ಮೂಲಕ ಆರೋಪಿತರಾದ ನೀವು **ಮೋಟಾರು ವಾಹನ ಕಾಯ್ದೆ ಕಲಂ. 3 ಸಹಿತ 181** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪಿರ್ಯಾದಿಯವರ ಕಾರಿಗೆ ಕೈಯಿಂದ ಗುದ್ದಿ, ಕಲ್ಲುಗಳಿಂದ ಹೊಡೆದು ಡ್ಯಾಮೇಜ್ ಮಾಡಿ ಸುಮಾರು ರೂ.25,000/- ಗಳಷ್ಟು ಲುಕ್ಸಾನು ಪಡಿಸಿದ್ದು, ಈ ಮೂಲಕ ಆರೋಪಿತರಾದ ನೀವು **ಭಾರತೀಯ ದಂಡ ಸಂಹಿತೆ ಕಲಂ. 427 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಈ ಮೇಲೆ ಹೇಳಿದ ದಿನಾಂಕ , ಸಮಯ ಹಾಗೂ ಸ್ಥಳದಲ್ಲಿ, ಆರೋಪಿತರಾದ ನೀವು ಅಪರಾಧ ಮಾಡುವ ಸಮಾನ ಉದ್ದೇಶದಿಂದ, ಪಿರ್ಯಾದಿಗೆ ಉದ್ದೇಶಿಸಿ ಕಾರಿನ ಡೋರ್ ತೆಗೆದು ಹೊರಗೆ ಬಾ ನಿನ್ನನ್ನು ಬಿಡುವುದಿಲ್ಲ ಎಂದು ಜೀವ ಬೆದರಿಕೆ ಹಾಕಿದ್ದು,

ಈ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ. 506 ಸಹವಾಚಕ ಕಲಂ. 34** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರೆಂದು ಆರೋಪಿಸಲಾಗಿದೆ.

ಪ್ರಶ್ನೆ1 : ಈಗ ನಿಮಗೆ ಓದಿ ಹೇಳಿದ ಆರೋಪಣೆ ತಿಳಿಯಿತೆ?

1 ಮತ್ತು 2 ನೇ ಆರೋಪಿತರ ಉತ್ತರ : ತಿಳಿಯಿತು.

ಪ್ರಶ್ನೆ2 : ಸದ್ರಿ ಆರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೇ ?

1 ಮತ್ತು 2 ನೇ ಆರೋಪಿತರ ಉತ್ತರ : ವಿಚಾರಣೆಯಾಗಬೇಕು.

(ಈ ಮೂಲಕ ಪ್ರಮಾಣಿಸುವುದೇನೆಂದರೆ ಆರೋಪಿಯು ಕೊಟ್ಟಂತ ಹೇಳಿಕೆಯ ಉತ್ತರವನ್ನು ಪಡೆಯಲಾಗಿದೆ )

ಸಹಿ ಇದೆ.

**ದಿನಾಂಕಃ 14-02-2024.**

(ಈರಣ್ಣ ಹುಣಶಿಕಟ್ಟಿ).,
ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ರವರ ನ್ಯಾಯಾಲಯ.,ಹೊನ್ನಾವರ.

| | | |
|---|---|---|
| 1 ನೇ ಆರೋಪಿ | ಪ್ರಸಾದ ತಂದೆ ವೆಂಕಟರಮಣ ಆಚಾರಿ . | |
| 2 ನೇ ಆರೋಪಿ | ಮಣಿಕಂಠ ತಂದೆ ಮಂಜುನಾಥ ನಾಯ್ಕ. | |

ಸಹಿ ಇದೆ.

***********